ದಿನ ನಿತ್ಯದ ಚಿಂತೆಗಳ ನಡುವೆ ನಾನು ದಿನಕ್ಕೊಮ್ಮೆ ಕರೆ ಮಾಡುವ ಐದು ನಿಮಿಷದ ಗೆಳತಿ ಮಾತ್ರ. ಇನ್ನು ಅಣ್ಣ... ಅವನ ಬಗ್ಗೆ ಏನನ್ನೂ ದೂರಲಾರೆ. ಯೋಚಿಸುವುದೂ ಕೂಡಾ ಇಲ್ಲ. ಆಪರೇಷನ್ ಆದ ಕ್ಷಣದಿಂದ ಅವನು ನನ್ನ ಮಗುವಾಗಿದ್ದಾನೆ. ಅಮ್ಮ ಯಾವತ್ತೂ ತನ್ನ ಮಕ್ಕಳ ಬಗ್ಗೆ ದೂರೋದಿಲ್ಲ ಅಲ್ವಾ?'

ಅವಳು ಹೇಳುತ್ತಲೇ ಇದ್ದಳು. ಹೊರಗಡೆ ಶುಭ್ರ ಆಕಾಶದ ರಾತ್ರಿಯೊಂದು ಎದೆಯ ತುಂಬಾ ಚುಕ್ಕಿಗಳ ಹರಡಿಕೊಂಡು ನಿಂತಿತ್ತು. ಸ್ಪೀಕರಿನಿಂದ ಹೊಮ್ಮುತ್ತಿದ್ದ ಅವಳ ಮಾತಿನದೇ ಜಾಡು ಹಿಡಿದಂತೆ ನಡೆಯುತ್ತಾ ಅವನು ಅಂಗಡಿಯ ಅಂಗಳ ತಲುಪಿದ್ದ. ಅವಳು ಮುಂದುವರೆಸಿದಳು.

'ಪ್ರೀತಿ, ಮದುವೆ ಅನ್ನೋದೆಲ್ಲ ನನ್ನ ಯಾವ ರಾತ್ರಿಯ ಕನಸೂ ಆಗಿರಲಿಲ್ಲ ಶ್ರೀ, ನೀನು ಸಿಗುವತನಕ. ಅದೇಕೆ ನಿನ್ನನ್ನು ಹಚ್ಚಿಕೊಂಡೆ? ಅದು ಹೇಗೆ ನಿನ್ನನ್ನು ಪ್ರೀತಿಸಿದೆ? ಮೊದಲ ಬಾರಿಗೆ ನನ್ನ ಬ್ಯಾಗು ಹಿಡಿದು, ಲಾಂಚಿನ ತನಕ ಬಂದು, ಕೈ ಬೀಸುತ್ತಾ ದಡದಲ್ಲೇ ಉಳಿದು ಹೋದ ನಿನ್ನಲ್ಲಿ ನನ್ನ ನಾಳೆಗಳೇಕೆ ಕಂಡವು? ನೀರು ಹಿಂದೆ ಹೋಗಿ ಹೊರ ಬಂದ ಅದ್ಭುತ, ಅಪರೂಪದ ಲೋಕದಲ್ಲಿ ನೀನೇಕೆ ನನ್ನ ಕೈ ಹಿಡಿದೆ? ಆಗ ನಾನೇಕೆ ಏನೂ ಹೇಳಲಿಲ್ಲ? ನನ್ನೊಳಗೂ ಒಬ್ಬ ಹೆಣ್ಣಿದ್ದಾಳೆನ್ನುವ ಕಾರಣಕ್ಕೇ? ಮುತ್ತೈದೆ ಬಾಗೀನದ ಆಸೆಗೇ? ಆಸ್ಪತ್ರೆಗೊಯ್ಯುವ ಗಂಡನ ನಿರೀಕ್ಷೆಗೇ ಅಥವಾ ಬಾಯಿ ಕೆಸರಾದ ಮಗುವಿನ ಮೋಹಕ್ಕೇ? ಅಥವಾ ಇವೆಲ್ಲವನ್ನೂ ಮೀರಿದ ಇನ್ನಾವುದೋ ಮನುಷ್ಯ ಸಹಜ ವಾಂಛೆಯಿಂದಲೇ? ಗೊತ್ತಿಲ್ಲ ಶ್ರೀ. ಒಂದು ಹೆಣ್ಣಿಗೆ ಒಂದು ಗಂಡು ಅದೇಕೆ ಇಷ್ಟವಾಗುತ್ತಾನೋ ಗೊತ್ತಿಲ್ಲ. ಆದರೆ, ಶ್ರೀ, ನೀನು ನನಗೆ ಮೇಲೆ ಹೇಳಿದ ಯಾವುದನ್ನೂ ಕೊಡುವುದಿಲ್ಲ ಅಂದುಕೊಂಡರೂ ನಿನ್ನ ಮೇಲಿನ ಪ್ರೀತಿ ನನಗೆ ಕಡಿಮೆ ಆಗುವುದಿಲ್ಲ. ಹೌದು ಕಣೋ. ನಿನ್ನ ಅಮ್ಮ ಕರೆಯುವ 'ಕೂಸೇ' ಎಂಬ ಕರೆ ಆಗಲೂ ನನಗೆ ಇಷ್ಟವಾಗುತ್ತದೆ. ಯೋಚನೆ ಮಾಡು' ಶ್ರೀಮುಖ ಮೆಲ್ಲನೆ ಅಂಗಡಿಯ ಬಾಗಿಲು ತೆರೆದು ದೀಪ ಹಾಕಿದ. ಗೋಡೆಗೆ ತೂಗು ಹಾಕಿದ ಅಪ್ಪನ ಫೋಟೊ ಇನ್ನಾದರೂ ಮುಗುಳ್ನಗುತ್ತಲೇ ಇತ್ತು. ಆ ನಗುವಿನ ಮೂಲಕ ಅಪ್ಪ ತಮಗೇನೋ ಹೇಳುತ್ತಿರುವಂತೆನಿಸಿ, ಆ ಕಣ್ಣನ್ನೇ ದಿಟ್ಟಿಸುತ್ತಾ ನಿಂತ.



'ಎಂತಾತು ಮಗಾ?' ಮೃದು ಕೈಯೊಂದು ಅವನ ಭುಜದ ಮೇಲೆ ಪ್ರತ್ಯಕ್ಷವಾಯಿತು. ಆ ತಣ್ಣಗಿನ ಸ್ಪರ್ಷಕ್ಕೆ ಅವನು ತಿರುಗಿ ನೋಡಿದ.

'ನಾ ಎಲ್ಲ ಕೇಳ್ಸ್ಕಂಡಿ ಮಗಾ. ಆ ಕೂಸು ಹೇಳಿದ್ರಲ್ಲಿ ಎಂತದೂ ತಪ್ಪಿಲ್ಲೆ. ಯಂಗ್ ಗೊತ್ತಿದು. ನಿಂಗೆ ಅಪ್ಪ ಹೇಳಿರೆ ಎಷ್ಟು ಪ್ರೀತಿ ಅಲ್ದಾ ಮಗಾ? ಅವ್ರ ಕನ್ಸಾದ ಈ ಅಂಗ್ಡಿನ ಉಳ್ಸಿಕಳ್ಳಲೆ ಹೇಳಿ ನೀ ಎಷ್ಟು ಒದ್ದಾಡ್ತಿದ್ದೆ ಅಲ್ದಾ? ಯಂಗೆಲ್ಲ ಗೊತ್ತಾಗ್ತು ಮಗಾ. ನಿನ್ ನೋಡ್ದಾಗೆಲ್ಲ ಯಂಗೆ ಅವ್ರದ್ದೇ ನೆನಪಾಗ್ತು. ಅವ್ರೂ ನಿನ್ನಂಗೇಯ. ಈ ಅಂಗ್ಡಿ ಮೇಲೆ ಅದೆಂತ ಪ್ರೀತಿನೋ ಏನೋ? ಸುಮ್ನೆ ಒದ್ದಾಡ್ತಿದ್ದ. ಇದನ್ನ ಬಿಟ್ರೆ ಬೇರೆ ಬದ್ಕೇ ಇಲ್ಲೆ ಅನ್ನುವಂಗೆ ಹೋರಾಡ್ತಿದ್ದ. ಆದ್ರೆ ಮಗಾ, ಆ ಕಾಲ್ದಲ್ಲಿ ಅದೆಲ್ಲ ನಡ್ಯೋತು. ಈಗ ಹಂಗಿಲ್ಲೆ. ಆ ಕೂಸು ನಿನ್ಮೇಲೆ ಪ್ರಾಣಾನೇ ಇಟ್ಕ್ಯಂಡು. ಯೋಚ್ನೆ ಮಾಡಡ. ಅಪ್ಪ ಇದ್ದಿದ್ರೂ ಈಗ ನಿಂಗೆ ಇದ್ನೇ ಹೇಳ್ತಿದ್ದ. ಅಂಗ್ಡೀನ ನಾ ನೋಡ್ಕತ್ತಿ. ಕಾಳಜಿ ಮಾಡಡ. ಬೆಂಗ್ಳೂರಿಗೆ ಹೋಗು. ಅಪ್ಪ ಯಾವಾಗ್ಲೂ ನಿನ್ ಮನಸಲ್ಲೇ ಇರ್ತ್ವ'

ಶ್ರೀಮುಖ ನೋಡಿದ. ಅಮ್ಮ, ಅಪ್ಪನ ಫೋಟೊದ ಪಕ್ಕ ನಿಂತಿದ್ದಳು. ಅರೆ ಕ್ಷಣ ಅಪ್ಪನೂ ಅವಳಂತೆಯೇ ಜೀವಂತವಾಗಿ ನಿಂತಿರುವಂತೆನಿಸಿತು. ಮರುಕ್ಷಣ ಅವಳೂ ಅಪ್ಪನಂತೆ ಫೋಟೊದಲ್ಲಿರುವಂತೆ ಭಾಸವಾಯಿತು. ಶ್ರೀಮುಖ ಬೆಚ್ಚಿಬಿದ್ದ.

'ಕಥೆಗಳಲ್ಲಿ, ಸಿನಿಮಾಗಳಲ್ಲಿ ಖಳನಾಯಕರುಗಳಿರ್ತಾರೆ. ಆದರೆ, ನಿಜದಲ್ಲಿ ಹಾಗಲ್ಲ. ಇಲ್ಲಿ ಜೀವನವೇ ಖಳನಾಯಕ' ಅಪ್ಪ ಹೇಳುತ್ತಿದ್ದ ಮಾತು ಅದೇಕೋ ಮತ್ತೆ ಮತ್ತೆ ನೆನಪಾಯಿತು.

* * *

ಮನೋಹರಿ ಖುಷಿಯಲ್ಲಿದ್ದಳು. ಅವಳು ಊರಿಗೆ ಬಂದಿದ್ದ ಎರಡು ಉದ್ದೇಶಗಳೂ ಈಡೇರಿದ್ದವು. ಶರತ್ತಿನ ಮೇಲಾದರೂ ಅಣ್ಣ ಮದುವೆಗೆ ಒಪ್ಪಿದ್ದ.